ಆದೇಶ ಸಂಖ್ಯೆ ಎಸ್.ಎಲ್.ಡಬ್ಲ್ಯೂ ೬೬ ಬಿ.ಸಿ.ಎ. ೮೬, ದಿನಾಂಕ ೧೩-೧೦-೧೯೮೬ರ ಪ್ರಕಾರ, ನಿಗಧಿತ ಕೊನೆಯ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ ಮೇಲಿನ ಆದೇಶದ ಫಲಾನುಭವಿಗಳಾಗಲು ಇಚ್ಛಿಸಿದವರಿಗೆ, ಅವರು ಅರ್ಜಿ ಸಲ್ಲಿಸಿದ ದಿನಾಂಕದಂದು ಇರುವಂತೆ, ಅನುಬಂಧ-೩ರಲ್ಲಿ ನಮೂನೆ-೨ ಅಥವಾ ೩ರಲ್ಲಿ ಹೊಸ ಘೋಷಣಾ ಪತ್ರವನ್ನು ಸಲ್ಲಿಸುವುದಕ್ಕಾಗಿ ಒಂದು ತಿಂಗಳ ಕಾಲಾವಕಾಶ ನೀಡಿ, ಅವರಿಂದ ಸ್ವೀಕೃತವಾಗುವ ಘೋಷಣೆಗಳಂತೆ ಹುದ್ದೆಗಳ : ಅಭ್ಯರ್ಥಿಗಳ ಪುನರ್ವಗೀಕರಣ ಮಾಡಿ ಮೇಲಿನ ಆದೇಶದಲ್ಲಿ ನಿಗದಿಪಡಿಸಿದ ರೋಸ್ಟರ್‌ನಂತೆ ಮೀಸಲಾತಿ ಸೌಲಭ್ಯ ನೀಡಬೇಕಾಗಿದೆ.

ರಾಜ್ಯ ಪತ್ರದಲ್ಲಿ ಅಭ್ಯರ್ಥಿಗಳ ಗಮನಕ್ಕಾಗಿ ಪ್ರಕಟಿಸಿದ ಆಯ್ಕೆ ಪಟ್ಟಿಯನ್ನು ಆದೇಶ ಸಂಖ್ಯೆ. ಎಸ್.ಎಲ್.ಡಬ್ಲ್ಯೂ ೬೬ ಬಿ.ಸಿ.ಎ. ೮೬, ದಿನಾಂಕ ೧೦-೧೦-೧೯೮೬ರ ಪ್ರಕಾರ ಮಾಡಬೇಕಾದ ಅನಿವಾರ್ಯವಾದ ಪರಿಸ್ಥಿತಿಯಿಂದಾಗಿ ಮತ್ತು ಆಡಳಿತಾತ್ಮಕ ಕಾರಣಗಳಿಂದಾಗಿ ತೊಡಕಾಗಿರುವುದರಿಂದ ರಾಜ್ಯ ಮಟ್ಟದ ಆಯ್ಕೆಪಟ್ಟಿಯನ್ನು ಅನುಷ್ಠಾನಗೊಳಿಸುವ ದಿಸೆಯಲ್ಲಿ ಆದೇಶ ಸಂಖ್ಯೆ. ಎಸ್.ಎಲ್.ಡಬ್ಲ್ಯೂ. ೮೬, ಬಿ.ಸಿ.ಎ. ೮೬, ದಿನಾಂಕ ೧೩-೧೦-೧೯೮೬ರ ಕಾರ್ಯವ್ಯಾಪ್ತಿಯಿಂದ ಹೊರತುಪಡಿಸಿ ಕ್ರಮ ಕೈಗೊಳ್ಳುವ ಸಾಧ್ಯ ಸಾಧ್ಯತೆಗಳ ಬಗ್ಗೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ (ಅಭಿಪ್ರಾಯ) ಇವರಿಗೆ ಅಭಿಪ್ರಾಯಕ್ಕಾಗಿ ಕಡತವನ್ನು ಮಂಡಿಸಿದೆ ಮತ್ತು ಅದರ ಬಗ್ಗೆ ಅಭಿಪ್ರಾಯವನ್ನು ನಿರೀಕ್ಷಿಸಿದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ ನೀಡಬಹುದಾದ ಅಭಿಪ್ರಾಯದ ಮೇರೆಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ನೇರ ನೇಮಕಾತಿಯ ಪ್ರವರ್ಗದ ಹುದ್ದೆಗಳಲ್ಲಿ ಈಗಾಗಲೇ ಗುತ್ತಿಗೆ ಆಧಾರದ ಉಪನ್ಯಾಸಕರು ಗಳು ಸೇವೆಯಲ್ಲಿ ಮುಂದುವರಿಯುತ್ತಿರುವ ಅಂಶವನ್ನು ಇಲ್ಲಿ ಸ್ಮರಿಸಬಹುದಾಗಿದೆ.

ನಿಯಮಾನುಸಾರ ಆಡಳಿತಾತ್ಮಕವಾಗಿ ಸಮಯೋಚಿತ : ನ್ಯಾಯವಾದ ನಿಲುವನ್ನು ತಳೆದು ರಾಜ್ಯ ಮಟ್ಟದ ಆಯ್ಕೆ ಸಮಿತಿಯಿಂದ ಆಯ್ಕೆಗೊಂಡ ಅಭ್ಯರ್ಥಿಗಳನ್ನು ನೇರ ನೇಮಕಾತಿ ಉಪನ್ಯಾಸಕರುಗಳ ಹುದ್ದೆಗಳಿಗೆ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಅಧ್ಯಕ್ಷರು,—ಶ್ರೀ ಪಂಲ್ಲಾರಿಗೌಡ ಎಸ್. ಪಾಟೀಲರು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಅಧ್ಯಕ್ಷರು.—ಶ್ರೀ ವಸಂತ ವಿ. ಸಾಲಿಯಾನಾರವರು.

(ಮಾನ್ಯ ಸದಸ್ಯರು ಹಾಜರಿಲ್ಲ)

8 ಕೃಷ್ಣಸಾಜನಗರದ ತಾಲ್ಲೂಕಿನ ಸಾಲಿಗ್ರಾಮ ಹೋಬಳಿ ಮತ್ತಿತರ ಕಡೆಗಳಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದ ರೈತರಿಗೆ ಪರಿಹಾರ ದೊರಕಿಸುವುದು.

ಶ್ರೀ ಎಸ್. ಸಂಜಪ್ಪ.—ಮಾನ್ಯ ಅಧ್ಯಕ್ಷರೇ ದಿನಾಂಕ ೨೦-೧೧-೮೬ರಂದು ಕೃಷ್ಣರಾಜನಗರದ ತಾಲ್ಲೂಕಿನ ಸಾಲಿಗ್ರಾಮ ಹೋಬಳಿಯ ಹರಪನಹಳ್ಳಿ ನೇಗವಿಳಂ, ಹೊನ್ನೇನಹಳ್ಳಿ ಲಕ್ಕಿಗುಪ್ಪ. ಕಂಲುಮೆ ಹೊಸೂರು ಮತ್ತು ಕುಂತಮ್ಮಕೆರೆ ಹಾಗೂ ಚುಂಚನಕಟ್ಟೆ ಹೋಬಳಿಯ ಹಾಡ್ಯ ಮತ್ತು ಬಂಡಳ್ಳಿ ಕೆರೆಗಳು ಮತ್ತು ನದಿಗಳೂ ಅತಿಯಾಗಿ ಮಳೆ ಬಂದ ಕಾರಣ ಒಡೆದಂಹೋಗಿ, ನಾಲ್ಕು ನೂರಕ್ಕೂ ಹೆಚ್ಚು ರೈತರ ವೀಳ್ಯದಲೆ ತೆಂಗಿನ ತೋಟ, ಅಡಿಕೆ ಬಾಳೆ ಮತ್ತು ಭತ್ತದ ಬೆಳೆಗೆ ನೀರು ನುಗ್ಗಿ ಬೆಳೆ ಕೊಚ್ಚಿ ಹೋಗಿ ರೈತರಿಗೆ ಲಕ್ಷಾಂತರ ರೂಪಾಯಿಗಳ ರೂಪಾಯಿಗಳ ನಷ್ಟ ವಾಗಿರುತ್ತದೆ ಈ ಬಗ್ಗೆ ಸಂಕಷ್ಟಕ್ಕೆ ಒಳಗಾಗಿರುವ ರೈತರಿಗೆ ನೆರೆ ಹಾವಳಿ ಪರಿಹಾರ ನಿಧಿಯಿಂದ ಪರಿಹಾರ ದೊರಕಿಸಿ ಕೊಡುವ ಬಗ್ಗೆ ರೆವಿನ್ಯೂ ಮಂತ್ರಿಗಳು ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ರಘುಪತಿ.—ಕಂದಾಯ ಸಚಿವರ ಪರವಾಗಿ, ಮಾನುಗಾರಿಕೆ ಮಂತ್ರಿ ಬಂದರುಗಳ ಖಾತೆಯ ಸಚಿವರು, ಮಾನ್ಯ ಅಧ್ಯಕ್ಷರೆ, ಉತ್ತರವನ್ನು ತರಿಸಿಕೊಡುತ್ತೇನೆ.

೧–೦೦ ಪಿ. ಎಂ.

ಅಧ್ಯಕ್ಷರು.—ಶ್ರೀ ಬಿ. ಎಂ. ಇದಿನಬ್ಬ	ಗೈರು ಹಾಜರು
ಶ್ರೀ ಗೋಪಾಲ ಪುಕಂದ ಕಾನಡೆ	,,
ಶ್ರೀಮತಿ ಮನೋರಮ ಮಧ್ವರಾಜ್	,,
ಶ್ರೀ ಬಿ. ಲಕ್ಕಪ್ಪ	,,
ಶ್ರೀ ಬಸವರಾಜ್	,,
ಶ್ರೀ ಡಿ.ಎ. ಚಿನ್ನಪ್ಪ	,,
ಶ್ರೀ ಸಿ.ಎಂ. ಉದಾಸಿ	,,

ಶ್ರೀ ಬಿ.ಎಸ್. ಯಡಿಯೂರಪ್ಪನವರು ತಮ್ಮ ವಿಷಯವನ್ನು ಓದಿ.

9. ಶಿಕಾರಿಪುರ ನಗರದಲ್ಲಿ ಹರಿಜನ-ಗಿರಿಜನ ಹಾಸ್ಟಲ್ ಕಟ್ಟಡದ ಗೋಡೆಗಳು ಶಿಥಿಲಗೊಂಡಿರುವುದರಿಂದ ತರ್ತು ದುರಸ್ತಿ ಮಾಡುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— "ಜಿಲ್ಲಾ ಪರಿಷತ್ ಆಸ್ತಿತ್ವಕ್ಕೆ ಬಂದಮೇಲೆ ಶಿಕಾರಿಪುರ ತಾಲ್ಲೂಕಿನಲ್ಲಿ ಈಗಾಗಲೇ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಶಿಕಾರಿಪುರ ನಗರದಲ್ಲಿ ಹರಿಜನ ಗಿರಿಜನ ಹಾಸ್ಟಲ್ ಮತ್ತಿಕೋಟೆ ಗ್ರಾಮದ ಫ್ರೀಮೆಟ್ರಿಕ್ ಹಾಸ್ಟಲ್ ಮತ್ತು ಹಿತ್ಲಗ್ರಾಮದ ಫ್ರೀಮೆಟ್ರಿಕ್ ಹಾಸ್ಟಲ್ ಕಟ್ಟಿದ್ದು, ಇವುಗಳಲ್ಲಿ ನಾಯಿ ನರಿಗಳು ವಾಸಮಾಡುತ್ತಿದ್ದು, ಶಿಥಿಲಗೊಳ್ಳುತ್ತಿದ್ದು ಸರ್ಕಾರದಿಂದ ಸಾಕಷ್ಟು ಹಣ ಬಿಡುಗಡೆ ಮಾಡಿದ್ದರು ಕಳೆದ ೬ ತಿಂಗಳಿಂದ ಜಿಲ್ಲಾಪರಿಷತ್ ಎಂಜಿನಿಯರ್ ವಿಭಾಗದವರು ಕೆಲಸ ಪ್ರಾರಂಭಿಸದಿರಲು ಕಾರಣವೇನು? ಬಜೆಟ್‌ನಲ್ಲಿ ಮಂಜೂರಾಗಿರುವ ಸಂಪೂರ್ಣ ಹಣವನ್ನು ಸಿ–ಸಿ–ರಿರವರ ಒಳಗೆ ಉಪಯೋಗಿಸಿಕೊಂಡು ಕಟ್ಟಡದ ಕೆಲಸ ಪೂರ್ಣ ಮಾಡಲು ಸರ್ಕಾರ ಆದೇಶ ನೀಡುವುದೇ ಎಂಬ ವಿಷಯದ ಬಗ್ಗೆ ಸರ್ಕಾರವು ಹೇಳಿಕೆ ತಿಳಿಯಬಯಸುತ್ತೇನೆ.

ಶ್ರೀ ಜಿ. ಬಸವಣೆಪ್ಪ.— ಮಾನ್ಯ ಸದಸ್ಯರು ಶಿಕಾರಿಪುರ ಟೌನ್‌ನಲ್ಲಿರುವ ಹರಿಜನ ಗಿರಿಜನ ವಿದ್ಯಾರ್ಥಿ ನಿಲಯದ ಕೆಲಸ ಮುಗಿಯುತ್ತಾ ಬಂದಿದ್ದು ಅಪೂರ್ಣವಾಗಿ, ೬ ತಿಂಗಳಿಂದ ಯಾವ ಕೆಲಸವೂ ನಡೆಯದೇ ಸ್ಥಗಿತಗೊಂಡಿದೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಸೂಕ್ತ ಪರಿಶೀಲನೆ ಮಾಡಿ ಅದಷ್ಟು ಜಾಗ್ರತೆ ಮುಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನೂ ಒಂದೆರಡು ಫ್ರೀಮೆಟ್ರಿಕ್ ಹಾಸ್ಟಲ್‌ಗಳ ಬಗ್ಗೆಯೂ ಸದಸ್ಯರು ಹೇಳಿದ್ದಾರೆ ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ, ಅವರೊಂದಿಗೆ ಚರ್ಚೆ ಮಾಡಿ ಸೂಕ್ತ ಕ್ರಮವನ್ನು ಆ ಬಗ್ಗೆ ದೆಗೆದುಕೊಳ್ಳುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ

ಅಧ್ಯಕ್ಷರು.— ಈಗ ಶ್ರೀ ರಮೇಶ್‌ಕುಮಾರ್‌ರವರು ನಿನ್ನೆಯಂದಿವಸ ಪ್ರಾರಂಭಿಸಿದ್ದ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಮುಂದುವರಿಸುವುದು.

ಶ್ರೀ ರಮೇಶ್ ಕುಮಾರ್.— ಸನ್ಮಾನ್ಯ ಅಧ್ಯಕ್ಷರೇ

ಶ್ರೀ ಬಿ.ಎಸ್. ಯಡಿಯೂರಪ್ಪ.— ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಸದನದಲ್ಲಿ ಮಾತನಾಡುವಾಗ ನಾವು ಈ ರಾಜ್ಯಕ್ಕೆ ಸಂಬಂಧಪಟ್ಟ ಎಲ್ಲಾ ಸಮಸ್ಯೆಗಳನ್ನು ಸದನದ ಮುಂದಿಡಬೇಕಾದ ಸಂದರ್ಭ ಇರುತ್ತದೆ. ಆದುದರಿಂದ ದಯವಿಟ್ಟು ವಿರೋಧಪಕ್ಷದವರನ್ನು ಕರೆಯಿಸಿ ಈ ಸಂದಿಗ್ಧ ಪರಿಸ್ಥಿತಿಯನ್ನು ಬಗೆ ಹರಿಸಬೇಕೆಂದು ವಿನಂತಿಸುತ್ತೇನೆ.